ಅಸೆಸ್ಡ್ ವೇಸ್ಟ್ ಸೇರಿದೆ. ಗೋಮಾಳ ಕೂಡ ಸೇರಿದೆ. ಇದು 67 ಸಾವಿರ ಎಕರೆ ಅಲ್ಲದೆ, 6099 ಎಕರೆ 20 ಗುಂಟೆ ಅವೇಲಬಲಿಟಿ ಲಸ್ಟ್‌ನಲ್ಲಿದೆ. ಈ 1600 ಎಕರೆಗೋಸ್ಕರ 803 ಅರ್ಜಿಗಳು ಬಂದಿವೆ. ಅದಕ್ಕೆ ಸಂಬಂಧಪಟ್ಟ 6099 ಎಕರೆ 20 ಗುಂಟೆ ಇದೆ. ಇದಕ್ಕೆ 3388 ಅರ್ಜಿಗಳು ಇವೆ. 67 ಸಾವಿರ ಎಕರೆ ಪೈಕಿ 14 ಸಾವಿರ 123 ಎಕರೆ ಬೇಕು ಎಂದು ಹೇಳಿ 3388 ಅರ್ಜಿಗಳು ಇವೆ. ಎಲ್ಲಾ ಅರ್ಜಿಗಳಿಗೂ ಕೊಡುವುದಕ್ಕೆ ಭೂಮಿ ಆ ತಾಲ್ಲೂಕಿನಲ್ಲಿ ಸಾಕಷ್ಟು ಇದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರೆವಿನ್ಯೂ ಇಲಾಖೆಗೆ ವಹಿಸಿಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆಯೇ ಹೊರತು ಅದು ಕಾರ್ಯಗತವಾಗಬೇಕಾದರೆ ಇನ್ನೂ ಎಷ್ಟು ದಿವಸದಲ್ಲಿ, ಭೂಮಿಯನ್ನು ರೆವಿನ್ಯೂ ಇಲಾಖೆಯವರಿಗೆ ವಹಿಸಿಕೊಡುತ್ತೀರಿ ? ದರಖಾಸ್ತು ಕಮಿಟಿಯವರು ಕೂತುಕೊಂಡು ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆವಿನ್ಯೂ ಇಲಾಖೆಯಲ್ಲಿ ಭೂಮಿ ಇದೆ, ಎಷ್ಟು ಭೂಮಿ ವ್ಯವಸಾಯಕ್ಕೆ ಅರ್ಹವಾಗಿದೆ ಎಂದು ಅರಿಸಿ ಭೂಮಿಯನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಏನು ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟಿದ್ದೀರಿ ಅದರಲ್ಲಿ ಗೋಮಾಳಗಳು ಇಲ್ಲವೇ ಇಲ್ಲ. ಆಕ್ಕೆರು ತೀರ್ಮಾನವನ್ನು ಸರ್ಕಾರ ಮಾಡಿಲ್ಲವೇ!

(ಉತ್ತರ ಇಲ್ಲ)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಎಷ್ಟು ದಿವಸದೊಳಗೆ ಕೊಡುತ್ತೀರಿ ಎಂದು ಕೇಳಿದೆ. ಅಲ್ಲಿ ಕಮಿಟಿ ಕೆಲಸ ಮಾಡುತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಮಿಟಿಯವರು ಕೊಡಬೇಕಾದದು 6099 ಎಕರೆ 20ಗುಂಟೆ ಭೂಮಿ ಇದೆ. ಅರ್ಜಿಗಳನ್ನು ವಿತರಣೆ ಮಾಡಲಕ್ಕೆ ಸಮಿತಿಯವರು ಬಹಳ ಬೇಗ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಇರುವ ಭೂಮಿಯನ್ನು ಹಂಚುವ ವ್ಯವಸ್ಥೆ ಮಾಡಬೇಕಾಗಿದೆ.

Bore Wells Scheme In Chikodi Taluk

527. **Sri P. P. HEGRE** (Chikodi).—

Will the Minister for Community Development and Social Welfare be pleased to state.—

(*a*) the names of villages and towns in Chikodi taluk which are included in Bore wells schemes;

(*b*) of these, the number of villages where bore wells have been sunk and the names of the villages where they are sunk so far;

(*c*) the number of them successful and the number of wells failed;

(*d*) the time required to complete sinking of bore wells in the remaining villages;

(*e*) whether Government has any proposals to take up more villages in Chikodi taluk under BoreWells Schemes?

Sri M. MALLIKARJUNASWAMY (Minister for Community Development and Social Welfare).—

(*a*)—

1 *Kangadoli*	2 Kamatyanatti
3 Donawad	4 *Kabbur*
5 Chikodi road	6 Mirapurahatti

(SRI M. MALLIKARJUNASWAMY)

7	Jainapur	8	Bidralli
9	*Umarani*	10	Itnal
11	Belkud	12	Bambalwad
13	*Chikodi*	14	Galatga
15	*Sadalga*	16	*Boragaon*
17	*Siradwad*	18	*Janawad*
19	*Shamanewadi*	20	*Bedkihal*
21	*Wadagol*	22	*Bhainaikwadi*
23	*Nej*	24	*Benadi*
25	*Nipani*	26	Adi
27	Appachiwadi	28	*Donewadi*
29	Handyanatti	30	Kuppanati
31	Karoshi	32	Bhoj
33	Kothalli	34	Kurli

(*b*) 16 Villages. They are Serial Numbers 1, 4, 9. 13, 15 to 25 and 28 of the list given against question (*a*).

(*c*) Successful ... 23
Failed ... 15

(*d*) Four months.

(*e*) Yes.

ಶ್ರೀ ಪಿ. ಪಿ. ಹೆಗರೆ.—ಚಿಕ್ಕೋಡಿ ತಾಲ್ಲೂಕಿನಲ್ಲಿ 34 ಗ್ರಾಮಗಳನ್ನು ಬೋರ್‌ವೆಲ್ ಸ್ಕೀಂನಲ್ಲಿ ತೆಗೆದುಕೊಂಡಿದ್ದೇವೆ ಎಂದು ಹೇಳಿದಿರಿ, ಅದರ ಬಗ್ಗೆ 16 ಗ್ರಾಮಗಳಲ್ಲಿ ಮಾತ್ರ ಬೋರ್‌ವೆಲ್ ಆಗಿದೆ. ಇನ್ನು ಉಳಿದ 18 ಗ್ರಾಮಗಳಿಗೆ ಇನ್ನು ನಾಲ್ಕು ತಿಂಗಳು ಬೇಕಾಗುತ್ತದೆ ಎಂದು ಹೇಳುತ್ತೀರಿ, ಅಲ್ಲಿ ನೀರಿನ ಅತ್ಯಂತ ಕೊರತೆ ಇರುವುದರಿಂದ 4 ತಿಂಗಳೊಳಗೆ ಈ 18 ಗ್ರಾಮಗಳಿಗೂ ಆಗಬೇಕು. ಇವಲ್ಲದೆ 67 ಗ್ರಾಮಗಳು ಉಳಿಯುತ್ತವೆ, ಹಾಗಾದರೆ ಪೂರ್ಣವಾಗಿ ಎಲ್ಲಾ ಗ್ರಾಮಗಳಿಗೆ ನೀರನ್ನು ಒದಗಿಸಲಕ್ಕೆ ಎಷ್ಟು ಕಾಲಾವಕಾಶ ಬೇಕು ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಾಧ್ಯವಾದಷ್ಟು ಬೇಗ ಎಲ್ಲಾ ಗ್ರಾಮಗಳಿಗೂ ನೀರನ್ನು ಒದಗಿಸುತ್ತೇವೆ.

ಶ್ರೀ ಪಿ. ಪಿ. ಹೆಗರೆ.—ನೀರಿನ ಬರಗಾಲ ಇದ್ದಲ್ಲಿ, ಕುಡಿಯಲಕ್ಕೆ ನೀರು ಎಲ್ಲಿಯೂ ಇಲ್ಲ. ಈ 18 ಗ್ರಾಮಗಳಿಗೆ ನೀರನ್ನು ಒದಗಿಸುವುದಕ್ಕೆ ನಾಲ್ಕು ತಿಂಗಳು ಬೇಕಾಗುತ್ತದೆ, ಎಂದು ಹೇಳುತ್ತೀರಿ, ಈ ವರ್ಷ ಜನವರಿಯಲ್ಲಿಂದ ನೀರು ತಂದು ಕುಡಿಯಬೇಕು ಎನ್ನುವ ಪ್ರಶ್ನೆ ಇದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ 101 ಗ್ರಾಮಗಳು ಇವೆ, ಅವುಗಳಲ್ಲಿ 34 ಗ್ರಾಮಗಳಿಗೆ ನೀರನ್ನು ಕೊಡಬೇಕಾದರೆ, ನಾಲ್ಕು ತಿಂಗಳು ಬೇಕು, ಬಾಕಿ ಊರು ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಏನು ಮಾಡಬೇಕು. ಅಲ್ಲಿಗೆ ಸ್ಪೆಷರ್ ರಿಗ್ ಮೆಷನ್ಸ್ ಕಳುಹಿಸಿಕೊಟ್ಟು ಎಲ್ಲಾ ಗ್ರಾಮಗಳಿಗೂ 3-4 ತಿಂಗಳಲ್ಲಿ ಬೋರ್‌ವೆಲ್ ತೆಗೆಯುವಂತೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ 34 ಹಳ್ಳಿಗಳು ಮಾತ್ರ ಬೋರ್‌ವೆಲ್ಸ್ ಸ್ಕೀಂಗೆ ಸೇರಿರತಕ್ಕದ್ದು. ಫಲಪ್ರದವಾಗಿರತಕ್ಕ ಬೋರ್‌ವೆಲ್‌ಗಳಿಂದ ಕೆಲವು ಹಳ್ಳಿಗಳಿಗೆ ರಾತ್ರಿಗಳಲ್ಲಿ ನೀರನ್ನು ಒದಗಿಸತಕ್ಕ ಏರ್ಪಾಡು ಮಾಡಿದ್ದೇವೆ. ಯಾವ ಹಳ್ಳಿಗಳಲ್ಲಿ ನೀರು ಇಲ್ಲವೋ, ಅವೆಲ್ಲಕ್ಕೂ ಕೂಡ ನೀರನ್ನು ಒದಗಿಸುವುದಕ್ಕೆ ಸರ್ಕಾರ ತಕ್ಕ ಏರ್ಪಾಡನ್ನು ಮಾಡುತ್ತದೆ.

ಶ್ರೀ ಪಿ. ಪಿ. ಹೆಗರೆ.—ಚಿಕ್ಕೋಡಿ ಪರಿಸ್ಥಿತಿ ಕೆಟ್ಟಿದೆ, ಅಲ್ಲಿ ಜನರಿಗೆ ನೀರನ್ನು ಎಲ್ಲಿಂದ ತರಬೇಕು ಎನ್ನುವುದು ಸಮಸ್ಯೆ ಆಗಿದೆ. ಗಾಡಿಯಿಂದ ಮತ್ತು ಟ್ಯಾಂಕರ್ಸ್‌ನಿಂದ ತರುವುದು ಸಾಲುವುದಿಲ್ಲ, ಅವರಿಗೆ ನೀರನ್ನು ಎಲ್ಲಿಂದ ತರಬೇಕು ಎಂದು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. —ಎಲ್ಲಿ ನೀರು ಸಿಕ್ಕುತ್ತದೆಯೋ ಅಲ್ಲಿಂದ ತೆಗೆದುಕೊಂಡು ಹೋಗಿ ನೀರನ್ನು ಒದಗಿಸುತ್ತೇವೆ.

Formation of Separate Baindur Taluk

557. Sri A. G. KODGI (Baindur).—

Will the Minister for Revenue be pleased to state.—

(*a*) whether it has come to the notice of the Government that Baindur constituency of South Kanara district is economically, socially and educationally most backward area in the State and that for administrative convenience it is necessary to form a separate taluk;

(*b*) whether there is any demand before the Government for formation of separate Baindur taluk; if so, since when;

(*c*) the estimated recurring and non-recurring expenditure to be incurred for this purpose;

(*d*) whether the Government would take a suitable and early decision to form a separate taluk with a view to develop this backward area?

Sri N. HUTCHAMASTHY GOWDA (Minister for Revenue).—

(*a*) The proposals have been received for formation of separate Baindur Taluk.

(*b*) Yes, since 1966.

(*c*) As per the estimates prepared in 1963, the recurring expenditure is Rs.65,000. and non recurring expenditnre is Rs. 2,00,000.

(*d*) The question of re-organisation of many Taluks in the State is under the consideration of the Government.

ಶ್ರೀ ಎ. ಜಿ. ಕೊಡಗಿ.—ಮೊದಲನೆಯ ಪ್ರಶ್ನೆಗೆ ನೇರವಾಗಿ, ಆದರಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವೆಂದು, ಆಡಳಿತ ದೃಷ್ಟಿಯಿಂದ ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂಬ ನಲಹೆಗಳು ಬಂದಿವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಿಲ್ಲ. ಹಿಂದುಳಿದ ಪ್ರದೇಶ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದುಳಿದ ಪ್ರದೇಶವಲ್ಲ ಎಂದು ನೇರವಾಗಿ ಉತ್ತರ ಹೇಳುವುದಕ್ಕೆ ಬದಲಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಹೇಳಿ ಆ ಯೋಚನೆ ಇದೆಯೆಂದು ಹೇಳಿದ್ದೇನೆ ಅಷ್ಟೆ.

ಶ್ರೀ ಎ. ಜಿ. ಕೊಡಗಿ.—ತಾವು ಹಿಂದುಳಿದ ಪ್ರದೇಶವೆಂದು ಒಪ್ಪಿಕೊಂಡಿದ್ದೀರಿ ಎಂದು ನನ್ನ ಭಾವನೆ. ಈಗೆ ಇರುವಾಗ 1966 ರಿಂದ ಇದು ಪರಿಶೀಲನೆಯಲ್ಲಿದೆ, ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂದು ಸಲಹೆಗಳು ಬಂದಿವೆ ಎಂದು ಹೇಳಿದ್ದೀರಿ. (ಇ) ಗೆ ಉತ್ತರ ನೋಡಿದರೆ ಕೇವಲ ಆವೃತ್ತ ವೆಚ್ಚ 65000 ರೂಪಾಯಿ ಅನಾವೃತ್ತ ವೆಚ್ಚ 2 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಆರ್ಥಿಕ ದೃಷ್ಟಿಯಿಂದ ನೋಡಿದಾಗ ಇದು ನಣ್ಣ ಪೊತ್ತ. ಇದು ಆರ್ಥಿಕವಾಗಿ ಹಿಂದುಳಿದ ಪ್ರದೇಶವಿರುವಾಗ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಂಡು, ಆಡಳಿತದ ಅನುಕೂಲಕ್ಕಾಗಿ ಬೇರೆ ತಾಲ್ಲೂಕನ್ನು ರಚನೆ ಮಾಡಲಿಕ್ಕೆ ಇಚ್ಛೆಪಡುತ್ತೀರಾ ?